

# ಶ್ರದ್ಧಾ ಪ್ರೇಮ ಕಥೆ

ಮನೆಬಿಟ್ಟು ಓಡಿಹೋದವರನ್ನು ಮನೆಗೆ ಎಳೆದು ತರುವ ಅಪ್ಪ–ಅಮ್ಮನ ಕಥೆ ಸಿನಿಮಾಗಳಲ್ಲಿ ನೋಡಿರುತ್ತೀರಿ. ಆದರೆ ಸಿನಿಮಾದವರ ನಿಜಬದುಕಿನ ಸಿನಿಮೀಯ ಕಥೆ ಕೇಳಿದ್ದೀರಾ? 'ರಾಕ್ ಆನ್2' ಚಿತ್ರದ ಸಹನಟ ಫರ್ಹಾನ್ ಅಖ್ತರ್ ಜತೆ ಶ್ರದ್ಧಾ ಕಪೂರ್ ಪ್ರೇಮ ಪ್ರಸಂಗ ನಡೆಯುತ್ತಿದೆ ಎಂಬ ಸುದ್ದಿ ಈ ಹಿಂದೆ ಹರಡಿತ್ತು. ಇಬ್ಬರೂ 'ಸಹಬಾಳ್ವೆ' ನಡೆಸುತ್ತಿದ್ದಾರೆ ಎಂದೂ ಹೇಳಲಾಗಿತ್ತು. ಆ ವದಂತಿ ನಿಜ ಎನಿಸುವ ಘಟನೆ ನಡೆದಿದೆ.

ಶ್ರದ್ಧಾಳ ಅಪ್ಪ ಶಕ್ತಿ ಕಪೂರ್ ಮತ್ತು ಚಿಕ್ಕಮ್ಮ ಪದ್ಮಿನಿ ಕೊಲ್ಹಾಪುರೆ ಇಬ್ಬರೂ ಫರ್ಹಾನ್ ಮನೆಗೆ ಏಕಾಏಕಿ ಬಂದು ಶ್ರದ್ಧಾಳನ್ನು ಮನೆಗೆ ಎಳೆದುಕೊಂಡು ಹೋಗಿದ್ದಾರಂತೆ. ಪ್ರೇಮದ ಗೂಡಲ್ಲಿ ಕುಳಿತಿದ್ದ ಆಕೆಯನ್ನು ನೇರವಾಗಿ ಜುಹುವಿನಲ್ಲಿರುವ ತಮ್ಮ ನಿವಾಸಕ್ಕೆ ಕರೆದೊಯ್ದಿದ್ದಾರೆ. ಅಪ್ಪನ ಮಾತಿಗೆ ಬೆಲೆಕೊಟ್ಟು ಆಕೆ ಮನೆಗೆ ಬಂದಿಲ್ಲ, ಇಬ್ಬರ ನಡುವೆ ಮನೆಯೊಳಗೆ ದೊಡ್ಡ ಜಗಳವೇ ಆಗಿದೆ. ಕೊನೆಗೆ ಶಕ್ತಿ ತಮ್ಮ ಮಗಳನ್ನು ಬಲವಂತವಾಗಿ ಎಳೆದೊಯ್ದಿದ್ದಾರೆ ಎನ್ನಲಾಗಿದೆ. ಆದರೆ ಹೊರಗೆ ಬರುವಾಗ ಆಕೆ ಯಾವುದೇ ರೀತಿಯ ಅಸಹನೆ ವ್ಯಕ್ತಪಡಿಸುತ್ತಿರಲಿಲ್ಲ ಎಂದಿದ್ದಾರೆ ಪ್ರತ್ಯಕ್ಷದರ್ಶಿಗಳು. ಶ್ರದ್ಧಾ, ಶಕ್ತಿ ಕಪೂರ್ ಮತ್ತು ಪದ್ಮಿನಿ ಜತೆ ಫರ್ಹಾನ್‌ನ ಮನೆಯಿಂದ ಹೊರಗೆ ಬರುವ ದೃಶ್ಯಗಳನ್ನು ನೆರೆಯ ಫ್ಲಾಟ್‌ಗಳ ನಿವಾಸಿಗಳು ಸೆರೆಹಿಡಿದಿದ್ದಾರೆ. ಎರಡು ಮಕ್ಕಳ ತಂದೆ ಫರ್ಹಾನ್, ಪತ್ನಿ ಅಧುನಾ ಬಭಾನಿಯಿಂದ ದೂರವಾಗಿದ್ದಾನೆ. ಆದರೆ, ಅವರ ಬೇರ್ಪಡುವಿಕೆಗೆ ಇನ್ನೂ ಅಧಿಕೃತ ಕಾನೂನು ಒಪ್ಪಿಗೆ ಸಿಕ್ಕಿಲ್ಲ. ಮಗಳ ಆಯ್ಕೆಯ ಬಗ್ಗೆ ಶಕ್ತಿ ಮತ್ತು ಶಿವಾಂಗಿ ದಂಪತಿ ತುಂಬಾ ಅಸಮಾಧಾನ ಹೊಂದಿದ್ದಾರೆ ಎನ್ನುತ್ತವೆ ಮೂಲಗಳು.

# ಸುಶಾಂತ್ ಪ್ರೀತಿ ಎತ್ತ?

ಅವರನ್ ಬಿಟ್ ಇವರನ್ ಬಿಟ್ ಅವರ್‍ಯಾರು? ಹೀಗೆ ಕೇಳಿದರೆ ನಟ ಸುಶಾಂತ್ ಸಿಂಗ್ ರಜಪೂತ್ ಗಲಿಬಿಲಿಗೊಂಡಾನು. ಈ ಆಟಕ್ಕೆ ಆತನ ಕಣ್ಣಿಗೆ ಪಟ್ಟಿ ಕಟ್ಟಲೇಬೇಕಿಲ್ಲ. ಯಾರನ್ನು ಎಂದು ಆಯ್ದುಕೊಳ್ಳುವುದು ಎಂಬ ಗೊಂದಲ ಆತನದು. ಬಿಟೌನ್‌ಗೆ ಕಾಲಿಟ್ಟು ಹೆಚ್ಚು ಕಾಲವಾಗಿರದಿದ್ದರೂ, ಸುಶಾಂತ್‌ನ ಪ್ರೇಮಕಥನಗಳ ಇತಿಹಾಸ ಮಾತ್ರ ದೊಡ್ಡದು. ಅಂಕಿತಾ ಲೋಖಂಡೆಯೊಂದಿಗಿನ ಸಂಬಂಧ ಕಡಿದುಕೊಂಡಿದ್ದ ಆತ, ಸಾಮಾಜಿಕ ಜಾಲತಾಣಗಳಿಂದ ಮಾಯವಾಗಿದ್ದ. 'ರಾಬ್ತಾ' ಚಿತ್ರೀಕರಣದ ವೇಳೆಗೆ ಮತ್ತೆ ಪ್ರತ್ಯಕ್ಷವಾಗಿದ್ದ. 'ಎಂ.ಎಸ್. ಧೋನಿ' ಚಿತ್ರದಲ್ಲಿ ತನ್ನೊಟ್ಟಿಗೆ ತೆರೆ ಹಂಚಿಕೊಂಡಿದ್ದ ಕಿಯಾರಾ ಅಡ್ವಾನಿ ಜತೆಗೂ ಆತನ ಪ್ರೇಮ ಪರಿಣಯ ಶುರುವಾಗಿತ್ತು. ಆಗಾಗ್ಗೆ ಕೃತಿ ಸನೋನ್ ಒಟ್ಟಿಗೆ ತೆಕ್ಕೆ ಹಾಕಿಕೊಂಡು ಓಡಾಡಿ ಕೆಲ ತಿಂಗಳ ಹಿಂದೆಯೇ ಸುದ್ದಿ ಮಾಡಿದ್ದರು. ಅದರಲ್ಲಿಯೂ ಒಡಕು ಮೂಡಿದೆ ಎನ್ನುವಾಗಲೇ 'ರಾಬ್ತಾ' ನೆಪದಲ್ಲಿ ಇಬ್ಬರು ಮತ್ತೆ ಕಾಣಿಸಿಕೊಂಡಿದ್ದಾರೆ. ಅದರಲ್ಲಿಯೂ ಮನೀಶ್ ಮಲ್ಹೋತ್ರಾರ ಹುಟ್ಟುಹಬ್ಬದ ಸಂತೋಷಕೂಟದಲ್ಲಿ ಕೃತಿ ಮತ್ತು ಸುಶಾಂತ್ ಜೋಡಿ ಭಾರಿ ಸದ್ದು ಮಾಡಿದೆ. ಇಬ್ಬರ ಆತ್ಮೀಯತೆ ಎಲ್ಲೆ ಮೀರಿದ್ದು ಚರ್ಚೆಗೆ ಗ್ರಾಸವಾಗಿದೆ. ಕೃತಿ ಆತನನ್ನು ಚುಂಬಿಸಲು ಮುಂದಾಗಿದ್ದ ವಿಡಿಯೊ ವೈರಲ್ ಆಗಿದೆ. ಅಂಥದ್ದೇನೂ ನಡೆದಿಲ್ಲ ಎನ್ನುವುದು ಇಬ್ಬರ ಸ್ಪಷ್ಟನೆ. ಈಗೇನೋ ಕೃತಿ ಜತೆ ಸಲುಗೆಯಿಂದ ಸುತ್ತಾಡುತ್ತಿರುವ ಸುಶಾಂತ್, ಮುಂದಿನ ಸಿನಿಮಾ ವೇಳೆಗೆ ಯಾರ ಕೈ ಹಿಡಿದಿರುತ್ತಾನೆ ಎನ್ನುವುದು ಬಾಲಿವುಡ್ ಮಂದಿಯ ಕುತೂಹಲ.

